ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಹೆಚ್.ಎಂ ರಮೇಶಗೌಡ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1818
ಉತ್ತರಿಸಬೇಕಾದ ದಿನಾಂಕ : 24.03.2020

ಕ್ರಸಂ	ಪ್ರಶ್ನೆ	ಮಾಹಿತಿ
ಅ	ತುಮಕೂರು ಹಾಲು ಒಕ್ಕೂಟ ಬೆಂಗಳೂರು ವ್ಯಾಪ್ತಿಯಲ್ಲಿ ನಂದಿನಿ ಮಳಿಗೆ ಮತ್ತು ಹಾಲು ಮಾರಾಟ ಮಾಡಲು ಅನುಮತಿ ನೀಡಲು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರಿಪಡಿಸಲು ಯಾವ ಕ್ರಮ ಕೈಗೊಂಡಿದೆ;	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ	ನಂದಿನಿ ಮಳಿಗೆ ಪ್ರಾರಂಭ ಮಾಡಲು ಇರುವ ಆರಂಭಿಕ ಠೇವಣಿಯನ್ನು ಕೆನರಾ ಬ್ಯಾಂಕ್‌ನಲ್ಲಿಯೇ ಇಡಬೇಕು ಎಂಬ ನಿಯಮವನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ;	ನಂದಿನಿ ಮಳಿಗೆ ಪ್ರಾರಂಭ ಮಾಡಲು ಇರುವ ಆರಂಭಿಕ ಠೇವಣಿಯನ್ನು ಕೆನರಾ ಬ್ಯಾಂಕ್‌ನಲ್ಲಿಯೇ ಇಡಬೇಕು ಎಂಬ ನಿಯಮವಿರುವುದಿಲ್ಲ.
ಇ	ಕಳೆದ ಮೂರು ವರ್ಷಗಳಲ್ಲಿ ತುಮಕೂರು ಹಾಲು ಒಕ್ಕೂಟದಿಂದ ಎಷ್ಟು ನಂದಿನಿ ಮಳಿಗೆಗಳನ್ನು ಪ್ರಾರಂಭಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು.)	ಕಳೆದ ಮೂರು ವರ್ಷಗಳಲ್ಲಿ ತುಮಕೂರು ಹಾಲು ಒಕ್ಕೂಟದಿಂದ, ಪ್ರಾರಂಭಿಸಲಾದ ನಂದಿನಿ ಮಳಿಗೆಗಳ ವಿವರಗಳು ಕೆಳಕಂಡಂತಿರುತ್ತದೆ.

ನಂದಿನಿ ಮಳಿಗೆ ಇರುವ ಸ್ಥಳ	ಗುತ್ತಿಗೆದಾರರ ಹೆಸರು	ಗುತ್ತಿಗೆ ಅವಧಿ
ನೆಲಮಂಗಲ ಸಾರ್ವಜನಿಕ ಆಸ್ಪತ್ರೆ ಆವರಣ (ಬೆಂಗಳೂರು ಮಾರುಕಟ್ಟೆ ವ್ಯಾಪ್ತಿ)	ಶ್ರೀಮತಿ ಕಲಾವತಿ ಕೋಂ ಶಿವಶಂಕರ್, ಬಸವನಹಳ್ಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ.	01.08.2019 ರಿಂದ 31.07.2020
ತಿಪಟೂರು ತಾಲ್ಲೂಕು ಕಛೇರಿ ಆವರಣ (ತುಮಕೂರು ಜಿಲ್ಲಾ ವ್ಯಾಪ್ತಿ)	ಶ್ರೀ ರಘು.ಎನ್.ಡಿ ಬಿನ್ ದೊಡ್ಡಯ್ಯ, ನಾಗತಿಹಳ್ಳಿ, ಕೊನೆಹಳ್ಳಿ ಅಂಚೆ, ತಿಪಟೂರು	13.12.2018 ರಿಂದ 12.12.2020

			ತಿಪಟೂರು ರೈಲ್ವೆ ನಿಲ್ದಾಣ, ಫ್ಲಾಟ್ ಫಾರಂ – 1 (ತುಮಕೂರು ಜಿಲ್ಲಾ ವ್ಯಾಪ್ತಿ)	ಎಸ್.ಶಿವಶಂಕರ್ ಬಿನ್ ಬಿ.ಸಂಗನಬಸಪ್ಪ, #217/ಎ, 10ನೇ ಕ್ರಾಸ್, ಸ್ಟೆಲ್ಲಾ ಮೇರೀಸ್ ಶಾಲೆ ರಸ್ತೆ, ಕಂಚಗಟ್ಟ, ತಿಪಟೂರು ಟೌನ್.	06.05.2019 ರಿಂದ 05.05.2020
			ಶಿರಾ ತಾಲ್ಲೂಕು ಕಛೇರಿ ಆವರಣ (ತುಮಕೂರು ಜಿಲ್ಲಾ ವ್ಯಾಪ್ತಿ)	ಶ್ರೀಮತಿ ಎಸ್.ಸಿ.ಗೀತಾ ಕೋಂ ಲಿಂಗರಾಜು, ಮೇಳೆಕೋಟೆ ಗ್ರಾಮ, ತಾವರೆಕೆರೆ ಅಂಚೆ, ಗೌಡಗೆರೆ ಹೋಬಳಿ, ಶಿರಾ ತಾಲ್ಲೂಕು	15.07.2019 ರಿಂದ 14.07.2020
			ಕೊರಟಗೆರೆ ತಾಲ್ಲೂಕು ಕಛೇರಿ ಆವರಣ (ತುಮಕೂರು ಜಿಲ್ಲಾ ವ್ಯಾಪ್ತಿ)	ಶ್ರೀ ವಿಶ್ವನಾಥ್.ಎನ್.ಎಸ್ ಬಿನ್ ಲೇಟ್ ಶ್ರೀನಿವಾಸ್, ನಾಲ್ಕನೇ ವಾರ್ಡ್, ಕಾಳಿದಾಸ ಬಡಾವಣೆ, ಕೊರಟಗೆರೆ ಟೌನ್.	01.04.2019 ರಿಂದ 31.03.2020
ಈ	ನಂದಿನಿ ಹಾಲು ಮಾರಾಟ ಕೇಂದ್ರಗಳನ್ನು ಸ್ಥಾಪಿಸಲು ಇರುವ ಮಾನದಂಡಗಳೇನು;	ನಂದಿನಿ ಹಾಲು ಮಾರಾಟ ಕೇಂದ್ರಗಳನ್ನು ಸ್ಥಾಪಿಸಲು ಇರುವ ಮಾನದಂಡಗಳು ಈ ಕೆಳಕಂಡಂತಿವೆ. • ಹಾಲಿ ಇರುವ ರೀಟೇಲ್‌ದಾರರಿಗೆ ಅನಾನುಕೂಲವಾಗದಂತೆ ದೂರದಲ್ಲಿರಬೇಕು. • ಆಧಾರ್ ಕಾರ್ಡ್ ಪ್ರತಿ. • FSSAI (Food Safety and Standards Authority of India) ಪರವಾನಗಿ ಪತ್ರದ ಪ್ರತಿ • ಬೆಂಗಳೂರು ನಗರ ಮಾರುಕಟ್ಟೆ ವ್ಯಾಪ್ತಿಗೆ ರೂ.50000/– ಗಳು ಮತ್ತು ತುಮಕೂರು ಜಿಲ್ಲಾ ವ್ಯಾಪ್ತಿಗೆ ರೂ.25000/– ಗಳನ್ನು ಭದ್ರತಾ ಠೇವಣಿಯಾಗಿ ಪಾವತಿಸಬೇಕು. • ಒಕ್ಕೂಟದೊಂದಿಗೆ ಕರಾರು ಮಾಡಿಕೊಳ್ಳುವುದು.			
ಉ	ನಂದಿನಿ ಮಳಿಗೆಯನ್ನು ಸ್ಥಾಪಿಸಲು ನಿರುದ್ಯೋಗ ಯುವಕರಿಗೆ ಸರ್ಕಾರದಿಂದ ಸಹಾಯ ಧನ ಏನಾದರೂ ದೊರಕುತ್ತಿದೆಯೇ?	ಇಲ್ಲ.			

ಸಂಖ್ಯೆ : ಸಿಒ 26 ಸಿಸಿಬಿ 2020

(ಎಸ್.ಟಿ ಸೋಮಶೇಖರ್)

ಸಹಕಾರ ಸಚಿವರು